*ಕೊರಟಗೆರೆ ತಾಲ್ಲೂಕಿನಲ್ಲಿ ಪ್ರಾರ್ಥನಾ ಮಂದಿರ ಹಾಗೂ ಸ್ಮಶಾನಗಳ ಅಭಿವೃದ್ಧಿ.*

2208(2261) ಶ್ರೀ ಚಿನ್ನಿಗಪ್ಪ ಸಿ. (ಕೊರಟಗೆರೆ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ಸ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಮುಸ್ಲಿಂ ಬಾಂದವರ ಪ್ರಾರ್ಥನಾ ಮಂದಿರ ಮತ್ತು ಸ್ಮಶಾನಗಳ ಸಂಖ್ಯೆ ಎಷ್ಟು?

2. ಇದರ ಅಭಿವೃದ್ಧಿಗೆ ಸರ್ಕಾರದಿಂದ ಹಾಗೂ ವಕ್ಫ್ಸ್ ಮಂಡಳಿಯಿಂದ ಬಿಡುಗಡೆಗೊಂಡಿರುವ ಅನುದಾನವೆಷ್ಟು?

3. ಈ ತಾಲ್ಲೂಕಿನ ಹಲವಾರು ಪ್ರಾರ್ಥನಾ ಮಂದಿರಗಳು ತುಂಬಾ ದುಸ್ಥಿತಿಯಲ್ಲಿದ್ದು ಇದರ ಅಭಿವೃದ್ಧಿಗೆ ಸರ್ಕಾರವು ಶೀಘ್ರವೇ ಅನುದಾನ ಬಿಡುಗಡೆ ಮಾಡುವುದೇ?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ಸ್ ಸಚಿವರು) :—

1. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿ 11 (ಹನ್ನೊಂದು) ಮಸೀದಿಗಳು ಹಾಗೂ 3 (ಮೂರು) ಖಬ್ರಸ್ತಾನಗಳಿವೆ.

2. 2000-2001ನೇ ಸಾಲಿನಲ್ಲಿ ಸರ್ಕಾರವು ಕೊರಟಗೆರೆ ತಾಲ್ಲೂಕಿನ 5 ವಕ್ಫ್ಸ್ ಸಂಸ್ಥೆಗಳಿಗೆ ರೂ. 1,20,000-00 ಅನುದಾನವನ್ನು ಬಿಡುಗಡೆ ಮಾಡಿದೆ.

3. ಸರ್ಕಾರವು ಅಗತ್ಯತೆ ಇರುವ ವಕ್ಫ್ಸ್ ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತದೆ. ಹಾಗಾಗಿದ್ದು, ಸದರಿ ಸಂಸ್ಥೆಯಿಂದ ಕೋರಿಕೆ ಬಂದಲ್ಲಿ ಇದನ್ನು ಪರಿಶೀಲಿಸಲಾಗುವುದು.

**ಅನುಬಂಧ - ಅ**

| ಕ್ರಮ ಸಂಖ್ಯೆ | ವಕ್ಫ್ಸ್ ಸಂಸ್ಥೆಯ ಹೆಸರು | ಮಂಜೂರಾದ ಹಣ ರೂ. |
|---|---|---|
| 1. | ಖಬ್ರಸ್ಥಾನ, ಕೊಳಲ, ಕೊರಟಗೆರೆ ತಾಲ್ಲೂಕು | 25,000-00 |
| 2. | ಜಾಮಿಯಾ ಮಸೀದಿ, ಕೊಳಲ, ಕೊರಟಗೆರೆ ತಾ: | 25,000-00 |
| 3. | ಖಬ್ರಸ್ಥಾನ, (ಶಿಯಾ) ಹೋವನಹಳ್ಳಿ | 25,000-00 |
| 4. | ಜಾಮಿಯಾ ಮಸೀದಿ, ಕೊಳಲ, | 20,000-00 |
| 5. | ಬೈತುಲ್ ಖುಜ್ಜಿ ಅರಾಬಿಕ್ ಮದ್ರಸಾ, ಕರೀಂಪುರ್, ಕೊರಟಗೆರೆ ತಾಲ್ಲೂಕು | 25,000-00 |
| | ಒಟ್ಟು | 1,20,000-00 |